ಸಿವಿಲ್ ಜಡ್ಜ್ ಹಾಗೂ ಪ್ರ.ದ.ನ್ಯಾದಃ ನ್ಯಾಯಾಲಯಃ ನ.ರಾ.ಪುರ

**ಸಿ.ಸಿ ಃ 519/2024**

| | | |
|---|---|---|
| ಸಾಕ್ಷಿದಾರರ ಹೆಸರು | ಃ ಕೆ ಕುಮಾರ್ | ಸಿ.ಡಬ್ಲ್ಯೂ-7 |
| ತಂದೆಯ ಹೆಸರು | ಃ ಲೇಟ್ ಕೃಷ್ಣಮೂರ್ತಿ | ಪಿ.ಡಬ್ಲ್ಯೂ-4 |
| ವಯಸ್ಸು | ಃ **53** ವರ್ಷ | |
| ಉದ್ಯೋಗ | ಃ ಅಬಕಾರಿ ನಿರೀಕ್ಷಕರು, | |
| ವಾಸಸ್ಥಳ | ಃ ನ ರಾ ಪುರ | |

ದಿನಾಂಕಃ **15.06.2025** ರಂದು ಪ್ರಮಾಣವಚನ ಬೋಧಿಸಲಾಯಿತು.

ಃಃ ಮುಖ್ಯ ವಿಚಾರಣೆ ಃ ಮಾನ್ಯ ಃ ಎಪಿಪಿಯವರಿಂದ ಃಃ

ನಾನು 2024 ನೇ ಇಸವಿಯಿಂದ 10-06-2024 ನೇ ಇಸವಿಯವರೆವಿಗೂ ನ.ರಾ.ಪುರ ವಲಯದಲ್ಲಿ ಅಬಕಾರಿ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿನಾಂಕಃ 15.04.2024 ರಂದು ನಾನು ಕಡತವನ್ನು ಚಾಸಾ-1 ರವರಿಂದ ಮುಂದಿನ ತನಿಖೆಗಾಗಿ ಪಡೆದುಕೊಂಡಿರುತ್ತೇನೆ. ದಿಃ03-05-2024 ರಂದು ಮುದ್ದೆಮಾಲು-1 ರಲ್ಲಿರುವ 40 ಟೆಟ್ರಾ ಪ್ಯಾಕೇಟ್ ಗಳನ್ನು ಚಾಸಾ-4 ರವರ ಮುಖಾಂತರ ಎಫ್ ಎಸ್ ಎಲ್ ಗೆ ಕಳುಹಿಸಿಕೊಟ್ಟಿರುತ್ತೇನೆ. ದಿಃ 08-05-2024 ರಂದು ಆರೋಪಿತರು ನೀಡಿದ ಜಾಮೀನು ಆದೇಶದ ಪ್ರತಿಯನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ದಿಃ09-05-2024 ರಂದು ಚಾಸಾ-2 ಮತ್ತು 3 ರವರ ಹೇಳಿಕೆಗಳನ್ನು ದಾಖಲು ಮಾಡಿಕೊಂಡಿರುತ್ತೇನೆ. ದಿಃ10-05-2024 ರಂದು ಚಾಸಾ-4 ರವರ ಹೇಳಿಕೆ ದಾಖಲು ಮಾಡಿಕೊಂಡಿರುತ್ತೇನೆ. ಮುಂದಿನ ತನಿಖೆಗಾಗಿ ನಾನು ಕಡತವನ್ನು ಚಾಸಾ-8 ರವರಿಗೆ ಹಸ್ತಾಂತರಿಸಿರುತ್ತೇನೆ. ಸಾಕ್ಷಿಯು ಈಗಾಗಲೇ ನಿಶಾನೆಗೊಂಡಿರುವ ಮು. ಮಾ.1 ಮತ್ತು 2 ಅನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ದಿಃ03-05-2024 ರ ಎಫ್ ಎಸ್ ಎಲ್ ಗೆ ಕಳುಹಿಸಿದ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-7 ಎಂದು ಅದರಲ್ಲಿರುವ ತನ್ನ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು.

<u>ಪಾಟೀ ಸವಾಲು ಆರೋಪಿ ಪರ ಶ್ರೀ. ಎನ್ ವಿ ಎಸ್ ವಕೀಲರಿಂದ ಃ</u>

ನಾನು ಚಾಸಾ-1 ರವರಿಂದ ಈ ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ-1 ರವರಿಂದ ಸ್ವೀಕರಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿರುವುದಿಲ್ಲ. ಎಂ ಒ -1 ರಲ್ಲಿರುವ 40 ಟೆಟ್ರಾ ಪ್ಯಾಕ್ ಗಳ ಉತ್ಪಾದನಾ ದಿನಾಂಕ ಮತ್ತು ಬ್ಯಾಚ್ ನಂಬರ್ ಮಾಹಿಯನ್ನು ಯಾವ ದಾಖಲೆಗಳಲ್ಲಿಯು ಸಹ ನಮೂದು ಮಾಡಿರುವುದಿಲ್ಲ ಎಂದರೆ ಸರಿ. ನಾನು ಎಫ್ ಎಸ್ ಎಲ್ ಗೆ ಎಂ ಒ -1 ರಲ್ಲಿರುವ 40 ಟೆಟ್ರಾ ಪ್ಯಾಕ್ ಗಳನ್ನು ಎಣಿಕೆ ಮಾಡಿ ಕಳುಹಿಸಿರುವುದಿಲ್ಲ. ನ್ಯಾಯಾಲಯದಲ್ಲಿ 40 ಟೆಟ್ರಾ ಪ್ಯಾಕ್ ಗಳು ಇರುವುದಿಲ್ಲ ಎಂದರೆ ಸರಿಯಲ್ಲ. ನ್ಯಾಯಾಲಯದಲ್ಲಿ 39 ಟೆಟ್ರಾ ಪ್ಯಾಕ್ ಗಳು ಇವೆ ಎಂದರೆ ಸರಿ. ನಾನು ಚಾಸಾ-2 ರಿಂದ 4 ರವರ ಹೇಳಿಕೆಗಳನ್ನು ದಾಖಲು ಮಾಡಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಃಮರುವಿಚಾರಣೆ ಇಲ್ಲಃ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ

Sd/-xx
ಪ್ರ.ದ.ನ್ಯಾದಂಃ ನ.ರಾ.ಪುರ.

ಸಾಕ್ಷಿ ಸಹಿಃ